ಕೊಡಗಿನ ಶಾಂತಿ ಕೆ. ಅಪ್ಪಣ್ಣ ವೃತ್ತಿಯಿಂದ ಶುಶ್ರೂಷಕಿ. ಕೇಂದ್ರ ಸಾಹಿತ್ಯ ಅಕಾಡೆಮಿಯ ಯುವ ಪುರಸ್ಕಾರ ಪುರಸ್ಕೃತರು. ಚೆನ್ನೈನಲ್ಲಿ ವಾಸ. ಆಧುನಿಕ ಬದುಕಿನ ದ್ವಂದ್ವಗಳನ್ನು ಹಾಗೂ ಅಂತರಂಗದ ತುಮುಲಗಳನ್ನು ಬಹು ಸೂಕ್ಷ್ಮವಾಗಿ ಕಥೆಯಾಗಿಸುವ ಶಾಂತಿ ಸಮಕಾಲೀನ ಪ್ರಮುಖ ಕಥೆಗಾರರಲ್ಲೊಬ್ಬರು. 'ಮನಸು ಅಭಿಸಾರಿಕೆ' ಹಾಗೂ 'ಒಂದು ಬಾಗಿಲು ಮತ್ತು ಮೂರೂ ಚಿಲ್ಲರೆ ವರ್ಷಗಳು' ಪ್ರಕಟಿತ ಕಥಾ ಸಂಕಲನಗಳು.

ಕಾಯುತ್ತಿದೆಯೇನೋ ಎಂಬಂತೆ ಹಾದಿ ಒಯ್ದಲ್ಲಿಗೆ ಓಡಿದ್ದೆ, ಉರಿವ ಎದೆಯನ್ನು ಹೊತ್ತುಕೊಂಡು. ಆದರೆ, ಇಂದು ಈ ಕ್ಷಣದರೆಗೂ ಎದೆಯೊಳಗೆ ಬೆಂಕಿ ಹೊಗೆಯಾಡುತ್ತಲೇ ಇದೆಯೆಂಬುವುದೊಂದು ನಿರಾಕರಿಸಲಾರದ ಸತ್ಯ. ಅದರಾಚೆಗೆ... ಇಲ್ಲಿ ಇವರೆಲ್ಲರೂ ಸಹಾ ನನ್ನಂತೆಯೇ ಓಡಿದ್ದಾರೆ, ದಣಿದಿದ್ದಾರೆ, ಪಥ ಬದಲಿಸಿದ್ದಾರೆ, ಹೋರಾಡಿದ್ದಾರೆ ಎನ್ನುವುದೂ ಕೂಡ ಅಷ್ಟೇ ಸತ್ಯ. ಅವರವರ ಬೆನ್ನಿನ ಭಾರ ಬೇಕಿದ್ದರೆ ಬೇರೆಬೇರೆಯಾಗಿದ್ದೀತೆನ್ನಬಹುದು. ಆದರೆ, ಎಲ್ಲರ ಬದುಕಿನ ದಿಕ್ಕೂ ಬದಲಾಗಿದ್ದು ಮಾತ್ರ ನಿಜ.

ಬಾಲ್ಯದ ನಾನು, ಓಡಿಹೋದ ನಾನು, ಮರಳಿ ಬಂದಿರುವ ಈಗಿನ ನಾನು... ಉಮ್ಮಳಿಸಿ ಬರುತ್ತಿರುವ ನೆನಪು ಮತ್ತು ನೋವಿನಿಂದಾಗಿ ನನ್ನಿಂದ ಅಲ್ಲಿ ಕೂರಲಾಗಲಿಲ್ಲ.

ಎಲ್ಲಿ ಅವ್ವ? ನಾನು ಅತ್ತೆಯತ್ತ ನೋಡಿದೆ.

'ಮ್ಯಾಗ್ಲ್ ಕ್ವಾಣೆಲವ್ಳೆ. ಅಲ್ಲಿ ವಸ್ದಾಗಿ ರೂಂ ತೆಗ್ಸೀವೀ. ಮೊದ್ಲು ಏನಾರ ಒಸಿ ತಿನ್ನು, ಆಮ್ಯಾಕೋಗಿ ನೋಡುದ್ರಾಯ್ತು'. ಅತ್ತೆ ಅನ್ನುತ್ತಿರುವಂತೆಯೇ ಅವಳ ಸೊಸೆಯಿರಬೇಕು, ಲಕ್ಷಣವಾದ ಹುಡುಗಿಯೊಬ್ಬಳು ಕುಡಿಯಲು ನೀರು ತಂದಿಟ್ಟಿದ್ದಳು. 'ನಂ ದಿನೇಸುನ್ನೆಡ್ತಿ, ಇಲ್ಲೇ ಪಕ್ದೂರ್ದೇಯ', ಮತ್ತೆ ಅತ್ತೆಯದ್ದೇ ಮಾತು. ಅವಳು ಯಾವಾಗಲೂ ಹಾಗೆಯೇ... ನಾವೇನಾದರೂ ಹೇಳುವ ಮುಂಚೆ, ಕೇಳುವ ಮುಂಚೆ, ನಮ್ಮ ಮನಸಿನಲ್ಲಿರುವುದನ್ನು ಸರಿಯಾಗಿ ಊಹಿಸುತ್ತಾಳೆ. ಸ್ಪಂದಿಸುತ್ತಾಳೆ. ಬಹುಶಃ ಇಪ್ಪತ್ತು ವರ್ಷಗಳ ಕೆಳಗೆ ಹೊನ್ನಿ ನನ್ನ ಕಡೆ ಬೆರಳು ಮಾಡಿದ್ದಾಗ ಅತ್ತೆ ಜೊತೆಗಿದ್ದಿದ್ದರೆ ನನ್ನ ಬದುಕು ಹೀಗಲ್ಲದೆ ಬೇರೇನೋ ಆಗಿರುತ್ತಿತ್ತು ಅಂತಲೂ ಅನಿಸುತ್ತದೆ. ಇವತ್ತಲ್ಲ, ಎಷ್ಟೋ ಸಲ ಹೀಗನಿಸಿದ್ದಿದೆ. ಆದರೆ, ಅದು ಮರಳಿ ಬಾರದ ಕಾಲವೊಂದರ ನೆನಪಷ್ಟೇ ಹೊರತು ಬೇರೇನೂ ಅಲ್ಲವಲ್ಲ...

'ಅತ್ತೆ, ನಡಿ ಅವ್ವನ್ನ ನೋಡ್ಕಂಡು ಬರುವ ಮೊದಲು' ಎನ್ನುತ್ತ ನಾನು ಎದ್ದೆ. ಹೊಸತಾಗಿ ಕಟ್ಟಿಸಿದ್ದ ರೂಮಿನಲ್ಲಿ ಒಳ್ಳೆಯ ಬೆಳಕಿತ್ತು. ಅಮ್ಮ ಮಂಚದಲ್ಲಿ ಮಗ್ಗುಲಾಗಿ ಮಲಗಿ ಕಿಟಕಿಯಿಂದ ಹೊರಗೆ ನೋಡುತ್ತಿದ್ದಳು.

'ನಾವೇ ಮಗಿನಂಗೆ ನೋಡ್ಕಬೇಕು, ಆಕೀ ಕಡೆ ತಿರುಗ್ಸಿ ಮನುಗ್ಸಬೇಕು, ಇಲ್ಲಾಂದ್ರೆ ಬೆನ್ನೆಲ್ಲಿ ಉಣ್ಣು ಬಿದ್ಬುಡ್ತವಂತೆ' ಎಂದು ಅತ್ತೆ ಅವಳ ಬಳಿ ಹೋಗಿ ಮೆಲುವಾಗಿ ಕೈ ತಟ್ಟಿ ಎಬ್ಬಿಸಿದ್ದಳು.

'ಅತ್ಗ, ಪ್ರಬ ಬಂದ್ವನೆ ನೋಡು'.

ಅವ್ವ ಮಲಗಿದ್ದಂತೆಯೇ, ಕಣ್ಣು ಹೊರಳಿಸಿ ನನ್ನನ್ನು ನೋಡಿದಂತೆ ಮಾಡಿದಳು. ಮೊದಲಿಗೆ ಅವಳಿಗೆ ನಾನ್ಯಾರೆಂದು ಗುರುತಾಗಿರಲಿಲ್ಲ. ಆ ಕ್ಷಣದಲ್ಲಿ ಅವಳ ಕಣ್ಣುಗಳು ಏನನ್ನೂ ಹೊರಸೂಸದೆ ಖಾಲಿಯಾಗಿ ಆಳವಾಗಿ ಪಾಳುಬಿದ್ದ ಬಾವಿಯಂತೆ ಕಂಡವು.

ಎಷ್ಟು ಲಕ್ಷಣವಾಗಿದ್ದಳು ಅವ್ವ! ನನ್ನಂತೆಯೇ ಅವಳ ಪಾಲಿನ ಇಪ್ಪತ್ತು ವರ್ಷಗಳು ಅವಳ ಮೇಲೆ ದಾಳಿ ನಡೆಸಿದ್ದವು. ಆದರೆ, ನಿಧಾನಕ್ಕೆ ಅವಳಿಗೆ ನನ್ನ ಗುರುತು ಹತ್ತಿತಾದರೂ ಅವಳಿಂದ ಮಾತಾಡಲಾಗಲಿಲ್ಲ. ಆದರೆ, ಹೃದಯದಲ್ಲಿ ನಡೆದ ಏರುಪೇರುಗಳಿಂದ ಅವಳ ಮುಖದ ಗೆರೆಗಳು ಚಲಿಸಿದವು, ತುಟಿಯಂಚು ಹಿಗ್ಗಿ ಸಣ್ಣಗೆ ಮಣಮಣ ಅದುರತೊಡಗಿತು. ಕಂಗಳಲ್ಲಿ ಸಾವಿರ ಪ್ರಶ್ನೆಗಳನ್ನು ಒಮ್ಮೆಲೇ ಅರಳಿಸಿದ್ದಳು.

ಅವಳನ್ನು ನೋಡಿದಾಕ್ಷಣ ಅನಿಸಿದ್ದು ಅವಳನ್ನ ಈ ಸ್ಥಿತಿಯಲ್ಲಿ ನೋಡಬಾರದಿತ್ತು ಅಂತಲೇ.

ಮರುಕ್ಷಣ ಓಡಿಹೋಗಿ ಅವಳನ್ನು ಅಪ್ಪಿಕೊಳ್ಳಬೇಕಿತ್ತು, ಅವಳ ತಲೆಯನ್ನೆತ್ತಿ ಮಡಿಲಲ್ಲಿ ಇಟ್ಟುಕೊಂಡು ಅವ್ವಾ... ಅವ್ವಾ... ಅವ್ವಾ... ಎಂದು